Mr. SPEAKER.—That is the same question which has been disallowed.

ಶ್ರೀ ಎಸ್. ಗೋಪಾಲಗೌಡ.—ಈ ಸ್ಥಳವನ್ನು acquire ಮಾಡಬೇಕೆಂದು ಸರಕಾರದವರಿಗೆ ಪೌರಸಭೆಯವರು ಬರೆದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಬರೆದಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ವರ್ಷಗಳಿಂದ ಸರ್ಕಾರಕ್ಕೂ ಪೌರಸಭೆಗೂ ಮತ್ತೆ ವ್ಯವಹಾರ ನಡೆಯುತ್ತಿದೆ ?

ಶ್ರೀ ಟಿ. ಚನ್ನಯ್ಯ.—1948-49ನೇ ಇಸವಿಲಾಗಾಯಿತು ವ್ಯವಹಾರ ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರಿಗೂ ಪೌರಸಭೆಯವರಿಗೂ ಬಂದಿರತಕ್ಕಂಥ ಭಿನ್ನಾಭಿಪ್ರಾಯ ಯಾವ ಅಂಶದಮೇಲೆ ?

ಶ್ರೀ ಟಿ. ಚನ್ನಯ್ಯ.—ಭಿನ್ನಾಭಿಪ್ರಾಯವೇನೂ ಇಲ್ಲ. ಎಷ್ಟು ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೋ ಅಷ್ಟು ಅನಧಿಕೃತವಾಗಿ ಕಟ್ಟಿಕೊಂಡ ಮನೆಗಳ ಜಾಗವನ್ನು acquire ಮಾಡಿ ಮನೆಗಳನ್ನು ಕಟ್ಟಿಕೊಳ್ಳತಕ್ಕ ವ್ಯವಸ್ಥೆಮಾಡಬೇಕಾಗಿದೆ. ಅದಕ್ಕಾಗಿ ರೆವಿನ್ಯೂ ಕಮಿಷನರ್‌ರವರು ಅಲ್ಲಿಗೆ ಹೋಗಿ Local Self-Government ಕಮಿಷ್ನರವರಿಗೆ ರಿಪೋರ್ಟ್ ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ಅವರು Inspectionಗೆ ಇಟ್ಟುಕೊಂಡು ಜಾಗ್ರತೆ ತೀರ್ಮಾನ ಮಾಡುತ್ತಾರೆಂದು ಸರಕಾರಕ್ಕೆ ವರದಿ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಒಂದೊಂದು ಸೈಟಿಗೆ 1,000 ರೂಪಾಯಿಗಳು ಕೊಡಬೇಕು ಎಂದು ಷರತ್ತು ಹಾಕಿರುವುದರಿಂದ ಪೌರಸಭೆಯವರು ಸಾಧ್ಯವಾಗದೆ ಸ್ಥಳ acquire ಆಗದೆ ಹಾಗೆಯೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ; ಅದನ್ನು ನೋಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಇನ್ನು ಕಾಲ ವಿಳಂಬವಾಗದೆ ಈ ವಿಷಯವನ್ನು ಸರ್ಕಾರದವರು ಕೂಡಲೆ ಪರಿಶೀಲನೆಮಾಡಿ ಕಟ್ಟಿರುವ ಮನೆಗಳನ್ನು ಕೆಡವಿಸುವುದಕ್ಕೆ ಅವಕಾಶಕೊಡದೆ regularise ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—Local Self-Government Commissioner ಹೋಗಿ ನೋಡಿ ಅಜಮಾಯಿಷಿ ಮಾಡಿದನಂತರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

Vacant Land between Rajamahal-Guttahalli and Venkatarangapuram (acquisition of land for Play ground).

Q.—882. Sri V. R. NAIDU (Malleswaram).—

Will the Government be pleased to state:—

whether they intend to acquire the vacant land lying between Rajamahal-Guttahalli and Venkatarangapuram, belonging to Sri Lakshmikantharaj Urs, and give the same for playground for the use of the residents of that locality ?

A.—Sri T. CHANNIAH (Minister for Public Health and Local Self-Government).—

So far there is no representation from any one to acquire that area for a playground. Should the necessity to acquire the land arise the question will be considered by the Corporation of the City of Bangalore.

ಶ್ರೀ ವಿ. ಆರ್. ನಾಯ್ಡು.—ಜನಗಳ ಕಷ್ಟ ಸುಖಗಳನ್ನು ನೋಡುವುದು ಸರ್ಕಾರದ್ದೋ ಅಥವಾ ಜನಗಳದ್ದೋ ?

ಅಧ್ಯಕ್ಷರು.—ಅದು ಸರ್ಕಾರದ್ದೇ ಎಂಬುದು ಗೊತ್ತು.

ಶ್ರೀ ವಿ. ಆರ್. ನಾಯ್ಡು.—ರಾಜಾಮಹಲ್ ಗುಟ್ಟಹಳ್ಳಿ ಮತ್ತು ವೆಂಕಟರಂಗಪುರಂ ಇವುಗಳ ಮಧ್ಯದಲ್ಲಿರುವ ಶ್ರೀ ಲಕ್ಷ್ಮೀಕಾಂತರಾಜ್ ಅರಸಿನವರಿಗೆ ಸೇರಿದ ಬಾಲ ಜಮೀನನ್ನು ಸರ್ಕಾರದವರು ಅಕ್ವೈರು ಮಾಡಿಕೊಂಡು ಅದನ್ನು ಅಲ್ಲಿನ ಜನಗಳಿಗೆ ಆಟದ ಮೈದಾನವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಕೊಡುವ ಉದ್ದೇಶವಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಯಾರಿಂದಲೂ ಮನವಿಗಳು ಬಂದಿಲ್ಲ ಎಂದು ದಯಪಾಲಿಸಿದ್ದೀರಿ. ಜನರು ಸರ್ಕಾರಕ್ಕೆ 101 ಅರ್ಜಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಸರ್ಕಾರದವರು ಅರ್ಜಿಗಳು ಬಂದಿಲ್ಲವೆಂದು ಹೇಳುತ್ತಾರೆ, ಜನಗಳ ಕಷ್ಟ ಸುಖಗಳನ್ನು ವಿಚಾರಿಸುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ಜಮೀನು ಕಾರ್ಪೊರೇಷನ್‌ಗೆ ಸಂಬಂಧಿಸಿದುದು, ಆದ್ದರಿಂದ ಕಾರ್ಪೊರೇಷನ್‌ರವರಿಗೆ playground ಗಾಗಿ ಆ ಜಮೀನನ್ನು ಕೊಡಬೇಕೆಂಬುದಾಗಿ ಕೇಳಿಕೊಂಡರೆ, ಅವರು ಅದನ್ನು consider ಮಾಡಿ ಸರ್ಕಾರಕ್ಕೆ ಶಿಫಾರಸು ಕಳುಹಿಸಿದರೆ, ಆಗ ಸರ್ಕಾರದವರು ಆಲೋಚನೆ ಮಾಡುತ್ತಾರೆ. ಸರ್ಕಾರಕ್ಕೆ ಯಾವ ಶಿಫಾರಸ್ಸೂ ಕಾರ್ಪೊರೇಷನ್ನಿನಿಂದ ಇಲ್ಲಿಯತನಕ ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡು.—ರಾಜಾಮಹಲ್ ಗುಟ್ಟಹಳ್ಳಿ ಮತ್ತು ವೆಂಕಟರಂಗಪುರಂ, ಈ ಸ್ಥಳಗಳಲ್ಲಿ ಹೆಚ್ಚಾಗಿ ಬಡವರೂ ಮತ್ತು ಕಾರ್ಮಿಕರೂ ವಾಸ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ದೇಶದಲ್ಲಿ ಬಹುಭಾಗದ ಜನ ಬಡವರು ಎಂಬುದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಶ್ರೀ ಲಕ್ಷ್ಮೀಕಾಂತರಾಜ್ ಅರಸ್‌ರು ಯಾರು ?

Mr. SPEAKER.—That does not arise.

ಶ್ರೀ ವಿ. ಆರ್. ನಾಯ್ಡು.—ಈ ಜಮೀನು ಶ್ರೀ ಲಕ್ಷ್ಮೀಕಾಂತರಾಜ್ ಅರಸಿನವರದು ಎಂದು ಹೇಳುವುದಕ್ಕೆ ದಾಖಲೆ ಏನು ಇದೆ ?

ಅಧ್ಯಕ್ಷರು.—Corporationನವರು proposal ಕಳುಹಿಸಿದರೆ ನೋಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಜನಗಳಿಂದ ಮನವಿ ಬಂದರೆ ಜಾಗ್ರತೆ ಅದನ್ನು ಪರಿತೀಲನೆ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜನಗಳಿಂದ ಮನವಿ ಬಂದರೆ Corporationಗೆ ಕಳುಹಿಸಿ ಕೊಟ್ಟು ಅದನ್ನು consider ಮಾಡುವಹಾಗೆ ಹೇಳುತ್ತೇವೆ.

Sites for Government Servants in Vyalikaval

Q.—914. Sri N. HUCHMASTHYGOWDA (Huliyurdurga).—

Will the Government be pleased to state:—

(*a*) the number of Government servants that have requested for the grant of house building sites in Vyalikaval;

(*b*) of them the number that have deposited the amount;

(*c*) when the amounts were deposited;

(*d*) the arrangements made for the grant of sites to them?

A.—Sri T. CHANNIAH (Minister for Public Health and Local Self-Government).—

(*a*) 120.
(*b*) 44.
(*c*) 41 in 1951 and 3 during 1954.
(*d*) 60 sites allotted.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ದುಡ್ಡು ಕೊಟ್ಟಿರುವುದು ಕೋದಂಡರಾಮಪುರಂ Co-operative Society ಮುಖಾಂತರವಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೊಸೈಟಿಯವರು ಸೈಟು ವಿಂಗಡಿಸಿ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ Trust Board ಸೈಟನ್ನು ನೇರವಾಗಿ ವಿಂಗಡಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—Trust Board site ಗಳನ್ನು Layout ಮಾಡಿ ಅವರೇ ವಿಲೇವಾರಿ ಮಾಡಬೇಕೆಂಬುದಾಗಿ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸೈಟುಗಳನ್ನು ಕೊಡುವಾಗ 120 ಜನರಿಗೆ ದುಡ್ಡು ಕೊಡದೆ ಇರುವುದಕ್ಕೆ ಸೊಸೈಟಿ ಮುಖಾಂತರ ಅಥವಾ Trust Board-ಮುಖಾಂತರ ನೋಟೀಸ್ ಕೊಟ್ಟಿದೆಯೇ?

ಶ್ರೀ ಟಿ. ಚನ್ನಯ್ಯ.—60 ಜನರಿಗೆ ಸೈಟುಗಳನ್ನು ಕೊಡಬೇಕೆಂಬುದಾಗಿ ತೀರ್ಮಾನ ಮಾಡಿದವರ ಪೈಕಿ 44 ಮಂದಿ ಮಾತ್ರ ಹಣ ಕೊಟ್ಟಿದ್ದಾರೆ. ಬಾಕಿ ಜನ ಹಣ ಕೊಡದೆ ಇರುವುದರಿಂದ ಉಳಿದವರಿಗೆ ಸೈಟು ಕೊಡಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬಾಕಿ ದುಡ್ಡನ್ನು ಕೊಡುವುದಕ್ಕೆ ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—Trust Board ನವರು ಸೈಟ್ allotment ಮಾಡಿದ ತಕ್ಷಣ ದುಡ್ಡು ಕೊಡಬೇಕೆಂದು ನೋಟೀಸ್ ಕೊಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಉಳಿದಿರತಕ್ಕಂಥ ಒಟ್ಟು 120 ಜನರಿಗೂ ಒಂದೇ ಕಡೆ Colony ಮಾಡುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಸೈಟುಗಳು ಅದೇ ಜಾಗದಲ್ಲಿ ಇದ್ದ ಪಕ್ಷದಲ್ಲಿ ಏರ್ಪಾಟು ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

Huliyur Village Panchayet (Conversion into Municipality)

Q.—923. Sri C. H. LINGADEVARU (Chiknaikanahalli).—

Will the Government be pleased to state:—

(*a*) since when the Village Panchayet and people of Huliyur, Chiknaikanahalli Taluk, have been asking for the conversion of the village into a municipality;

(*b*) whether correspondence is not going on in the matter;

(*c*) at what stage it is and where does it stand now?

A.—Sri T. CHANNIAH (Minister for Public Health and Local Self-Government).—

(*a*) Since December 1952.
(*b*) Yes,
(*c*) The receipt of information about the limits of the local area of the proposed Municipality called for from the Commissioner for Local Self-Government is awaited.

ಶ್ರೀ ಸಿ. ಎಚ್. ಲಿಂಗದೇವರು.—ಮೂರು ವರ್ಷಗಳಿಂದ ನಾವಕಾಶವಾಗಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ರೆವಿನ್ಯೂ ಇಲಾಖೆಯವರು ಮತ್ತು L. S. G. Commissionerರವರು ಸ್ಥಳವನ್ನು ನೋಡಿ Area fix ಮಾಡಿ Town Municipal Council Limit ಎಷ್ಟು ಇರಬೇಕು ಎಂಬುದನ್ನು survey ಮಾಡಬೇಕು. ಎಷ್ಟು Area ಸೇರಿಸಿಕೊಳ್ಳಬೇಕು ಎಂಬ ವಿಷಯವನ್ನೆಲ್ಲಾ ಆಫೀಸರ್ ಅವರು ಮಾಡಬೇಕು. ರೆವಿನ್ಯೂ ಇಲಾಖೆಯವರು ಮಲೆನಾಡು ಎಷ್ಟು Area ಸೇರಿಸಬೇಕು ಎಂಬ ವಿಷಯದಲ್ಲಿ ಕಮಿಷನರ್ ಅವರಿಗೆ ಬರೆದಿದ್ದಾರೆ. ಅವರು ಅಲ್ಲಿ ಹೋಗಿ ಇಷ್ಟೇ Area ಸೇರಿಸಬೇಕು ಎಂದು limit fix ಮಾಡಬೇಕು. ಅವರು ಸ್ಥಳಕ್ಕೆ ಹೋಗಿ ಅವರಿಂದ ಸರ್ಕಾರಕ್ಕೆ ವರದಿ ಬಂದನಂತರ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಒಂದು ವಿಷಯದಲ್ಲಿ 1-1½ ವರ್ಷ ಕಾಗದ ಪತ್ರ ಕದಲದೆ ಕುಳಿತಿರುವುದು ಗೊತ್ತಿದೆಯೇ?